ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 1372/2023

ಚಾಸಾ:1 ಪ್ರಾಸಾ:2

ದಿನಾಂಕ: 03.06.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಹೆಚ್ ಎಸ್ ಸುರೇಶ್ |
| ತಂದೆಯ ಹೆಸರು | : | ಕೆ. ಸಣ್ಣ ಸಿದ್ದಯ್ಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಆಹಾರ ನಿರೀಕ್ಷಕರು |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2020 ರಿಂದ ಇಲ್ಲಿಯವರೆಗೂ ಕುಂದಾಪುರದ ಆಹಾರ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 25-05-2023 ರಂದು ನಾನು ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಸುಮಾರು 4-30 ಗಂಟೆಗೆ ಒಂದು ದೂರವಾಣಿ ಕರೆ ಬಂದಿತ್ತು. ಗುಜ್ಜಾಡಿ ಗ್ರಾಮದ ಕಂಚುಗೋಡು ಎಂಬಲ್ಲಿರುವ ಫೆಡ್ರಿಕ್ ಡಯಾಸ್-2ನೇ ಆರೋಪಿಯ ಮನೆಯಲ್ಲಿ 1ನೇ ಆರೋಪಿಯು ಸರಕಾರದಿಂದ ಉಚಿತವಾಗಿ ನೀಡುವ ಅನ್ನಭಾಗ್ಯ ಅಕ್ಕಿಯನ್ನು ಕಾನೂನು ಬಾಹಿರವಾಗಿ ದಾಸ್ತಾನು ಇರಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಸದ್ರಿ ಮಾಹಿತಿಯ ಮೇರೆಗೆ ನಾನು 4-45 ಗಂಟೆಗೆ ಕಚೇರಿಯನ್ನು ಬಿಟ್ಟು ಸುಮಾರು 5-30 ಗಂಟೆಗೆ ಗಂಗೊಳ್ಳಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಗಂಗೊಳ್ಳಿ ಪೊಲೀಸ್ ಠಾಣೆಗೆ ತಿಳಿಸಿ ಚಾಸಾ-2 ರವರ ಜೊತೆಯಲ್ಲಿ 5-30ಕ್ಕೆ ಠಾಣೆಯಿಂದ ಬಿಟ್ಟಿರುತ್ತೇವೆ. ಸುಮಾರು 6 ಗಂಟೆಗೆ 2ನೇ ಆರೋಪಿಯ ಮನೆಗೆ ಭೇಟಿ ನೀಡಿ ಅವರ ಮನೆಯಲ್ಲಿ ದಾಸ್ತಾನು ಇರಿಸಿರುವ ಅಕ್ಕಿಯ ಬಗ್ಗೆ ವಿಚಾರಿಸಲಾಗಿ ಸದ್ರಿಯವರು ಹಂಜಾ (1ನೇ ಆರೋಪಿ) ಎನ್ನುವವರು ಸರಕಾರದಿಂದ ನೀಡಿರುವ ಅಕ್ಕಿಯನ್ನು ಬೇರೆಯವರಿಂದ ಖರೀದಿಸಿ ಹೆಚ್ಚಿನ

ಬೆಲೆಗೆ ಅಂಗಡಿಗಳಿಗೆ ಮಾರಾಟ ಮಾಡುವ ಉದ್ದೇಶದಿಂದ ತಂದು ನನ್ನ ಮನೆಯಲ್ಲಿ ಕೂಡಿಸಿ ಇಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ.

ಸದ್ರಿ ಕೋಣೆಯ ಬಾಗಿಲನ್ನು ತೆಗೆಯಿಸಿ ನೋಡಿದಾಗ ಬಿಳಿ ಪಾಲಿಥೀನ್ ಚೀಲದಲ್ಲಿ 26 ಅಕ್ಕಿಯ ಚೀಲಗಳು ಇದ್ದವು. ಸದ್ರಿ ಅಕ್ಕಿಯನ್ನು ಪರಿಶೀಲಿಸಿದಾಗ ಸರಕಾರದಿಂದ ನೀಡುವ ಅನ್ನ ಭಾಗ್ಯ ಅಕ್ಕಿಗೆ ಹೋಲುತ್ತಿರುವುದರಿಂದ ಸದ್ರಿ ಅಕ್ಕಿಯನ್ನು ವಶಕ್ಕೆ ಪಡೆದು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತೇವೆ. ಹತ್ತಿರದ ಅಂಗಡಿಯಿಂದ ತೂಕ ಮಾಡುವ ಯಂತ್ರವನ್ನು ತರಿಸಿ ಪ್ರತಿ ಚೀಲವನ್ನು ತೂಕ ಮಾಡಿದಾಗ ಪ್ರತಿ ಚೀಲದಲ್ಲೂ 50 ಕೆ.ಜಿ ತೂಕದ ಬೆಳ್ತಿಗೆ ಅಕ್ಕಿ ಇರುತ್ತದೆ. ಒಟ್ಟು 1300 ಕೆ.ಜಿ ಅಕ್ಕಿಯಾಗಿರುತ್ತದೆ. ಪ್ರತಿ ಚೀಲದಿಂದ 100 ಗ್ರಾಂ ಅಕ್ಕಿಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಒಂದು ಬ್ಯಾಗ್ ನಲ್ಲಿ ಕ್ರೋಡಿಕರಿಸಿ ಬ್ಯಾಗ್ ಗೆ ಮೊಹರನ್ನು ಹಾಕಿ ಸಹಿಯನ್ನು ಮಾಡಿರುತ್ತೇವೆ.

ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರನ್ನು ಸಂಜೆ 6-05 ರಿಂದ 7-05 ಗಂಟೆಯವರೆಗೂ ಜರುಗಿಸಿರುತ್ತೇವೆ. ಸದ್ರಿ ಮಹಜರಿಗೆ ಪಂಚರಾದ ಚಾಸಾ-3 ಮತ್ತು 4ರವರು ಹಾಗೂ ನಾನು ಸಹಿಯನ್ನು ಮಾಡಿರುತ್ತೇವೆ ಹಾಗೂ ಸದ್ರಿ ಸ್ಥಳದ ಪೋಟೋವನ್ನು ತೆಗೆದಿರುತ್ತೇವೆ. ನಾವು ಜಪ್ತಿ ಪಡೆದ ಅಕ್ಕಿಯ ಚೀಲಗಳಲ್ಲಿ ಯಾವುದೇ branded name ಇರುವುದಿಲ್ಲ ಹಾಗೂ ಅವರ ಬಳಿ ಯಾವುದೇ ಬಿಲ್ಲುಗಳು ಸಹ ಇರುವುದಿಲ್ಲ. ನಂತರ ಪೊಲೀಸ್ ಠಾಣೆಗೆ ಹೋಗಿ ದೂರು ಅರ್ಜಿ ಕೊಟ್ಟು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಸ್ವಾಧೀನಕ್ಕೆ ಪಡೆದ ಅಕ್ಕಿಯನ್ನು ತಲ್ಲೂರು ಕೃಷಿ ಉತ್ಪನ್ನ ಮಾರುಕಟ್ಟೆ ಗೋದಾಮಿಗೆ ಹಸ್ತಾಂತರಿಸಿರುತ್ತೇವೆ.

ಪೊಲೀಸರು ಸದ್ರಿ ಅಕ್ಕಿಯು ಸರಕಾರದ ಅಕ್ಕಿ ಎಂಬ ಬಗ್ಗೆ ದೃಡೀಕರಣ ಕೇಳಿದ್ದು ಆ ಬಗ್ಗೆ ನಾನು ದೃಡೀಕರಣ ಪತ್ರ ನೀಡಿರುತ್ತೇನೆ.

ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದೂರನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-

3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪೊಲೀಸ್ ಉಪ ನಿರೀಕ್ಷಕರು ಗಂಗೊಳ್ಳಿ ಠಾಣೆಯವರು ನೀಡಿದ ಮನವಿ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮನವಿ ಪತ್ರವನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-1ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ದಿನ ರಾಸಾಯನಿಕ ಪರೀಕ್ಷೆಗಾಗಿ ಜಪ್ತಿ ಪಡಿಸಿಕೊಂಡ ಅಕ್ಕಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿ ಮುದ್ದೆ ಮಾಲು-1 ಅಂದರೆ 100 ಗ್ರಾಂನ 26 ಪ್ಯಾಕೇಟಿನ ಅಕ್ಕಿಯನ್ನು ನೋಡಿ ಗುರುತಿಸಿರುತ್ತಾರೆ. ಈಗ ಸಾಕ್ಷಿಗೆ ನಿಪಿ-2ನ್ನು ತೋರಿಸಲಾಗಿ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ.ಪಿ.ಕೆ.ಎಸ್ ರವರಿಂದಃ**

ನಿಮಗೆ ಎಷ್ಟು ಗಂಟೆಗೆ ಮಾಹಿತಿ ಸಿಕ್ಕಿರುತ್ತದೆ ಎಂದರೆ ಸಾಕ್ಷಿ ಸರಿ ಸುಮಾರು 4-30 ಗಂಟೆಗೆ ಎಂದು ನುಡಿಯುತ್ತಾರೆ. ಸದ್ರಿ ಮಾಹಿತಿಯು ನಿಮಗೆ ನೇರವಾಗಿ ಬಂದಿತ್ತಾ ಅಥವಾ ದೂರವಾಣಿ ಮುಖಾಂತರ ಬಂದಿತ್ತಾ ಎಂದರೆ ಸಾಕ್ಷಿ ದೂರವಾಣಿ ಮುಖಾಂತರ ಎಂದು ನುಡಿಯುತ್ತಾರೆ. ಮಾಹಿತಿ ಬಂದಾಗ ನೀವು ಎಲ್ಲಿ ಇದ್ದಿದ್ದೀರಿ ಎಂದರೆ ಸಾಕ್ಷಿ ತನ್ನ ಕಚೇರಿಯಲ್ಲಿ ಇದ್ದೇನು ಎಂದು ನುಡಿಯುತ್ತಾರೆ. ನಿಮಗೆ ಮಾಹಿತಿ ಬಂದಾಗ ಮನೆ ಹಾಗೂ ಊರಿನ ಬಗ್ಗೆ ಬರೆದು ಇಟ್ಟು ಕೊಂಡಿರುತ್ತೀರಾ ಎಂದರೆ ಸಾಕ್ಷಿ ನಮಗೆ ಮಾಹಿತಿ ಬಂದಾಗ ಸಣ್ಣ ಚೀಟಿಯಲ್ಲಿ ಬರೆದುಕೊಳ್ಳುತೇವೆ ಎಂದು ನುಡಿಯುತ್ತಾರೆ. ಮಾಹಿತಿದಾರರು ನಿಮಗೆ ಮಾಹಿತಿ ಕೊಡುವಾಗ ಇಂತಹವರ ಮನೆ ಹಾಗೂ ಪರಿಸರದ ಬಗ್ಗೆ ಮಾಹಿತಿ ನೀಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ಕುಂದಾಪುರದಿಂದ ಸದ್ರಿ ಘಟನಾ ಸ್ಥಳಕ್ಕೆ ಯಾವ ವಾಹನದಲ್ಲಿ ಹೋಗಿರುತ್ತೀರಿ ಎಂದರೆ ಸಾಕ್ಷಿ ನನ್ನ ಖಾಸಗಿ ವಾಹನ ನಂಬ್ರ ಕೆಎ-20-ಎಂಪಿ-5996 Swift Car ನಲ್ಲಿ ಎಂದು ನುಡಿಯುತ್ತಾರೆ. ನೀವು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಗಂಗೊಳ್ಳಿ ಪೊಲೀಸ್ ಠಾಣೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಎಷ್ಟು ಗಂಟೆಗೆ ಗಂಗೊಳ್ಳಿ ಠಾಣೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ 5-30ಕ್ಕೆ ಎಂದು ನುಡಿಯುತ್ತಾರೆ. ನೀವು ಠಾಣೆಗೆ ಹೋದಾಗ ಪಿ ಎಸ್ ಐ ರವರು ಇದ್ದಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಠಾಣೆಗೆ ಹೋದಾಗ ಠಾಣಾ ಪ್ರಭಾರದವರಿಗೆ ಲಿಖಿತವಾಗಿ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನೀವು ಚಾಸಾ-3 ಮತ್ತು 4 ರವರನ್ನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಕರೆದುಕೊಂಡು ಹೋಗಿರುತ್ತೀರಾ ಅಥವಾ ಸ್ಥಳಕ್ಕೆ ಹೋದ ನಂತರ ಕರೆಸಿರುತ್ತೀರಾ ಎಂದರೆ ಸಾಕ್ಷಿ ಸ್ಥಳಕ್ಕೆ ಹೋಗುವಾಗ ಅಲ್ಲೇ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಚಾಸಾ-3 ಮತ್ತು 4 ರವರು ನಿಮಗೆ ಮೊದಲೇ ಪರಿಚಯಸ್ಥರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರಿನಲ್ಲಿ ಚಾಸಾ-3 ಮತ್ತು 4 ರವರನ್ನು ಸ್ಥಳಕ್ಕೆ ಹೋದ ನಂತರ ಬರಮಾಡಿಕೊಂಡೆವು ಎಂದು ಬರೆದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-3 ಮತ್ತು 4 ರವರನ್ನು ಯಾರು ಕರೆಯಿಸಿರುತ್ತಾರೆ ಎಂದರೆ ಸಾಕ್ಷಿ ಚಾಸಾ-2 ರವರು ಎಂದು ನುಡಿಯುತ್ತಾರೆ. ನೀವು ಸ್ಥಳಕ್ಕೆ ಹೋದ ಎಷ್ಟು ನಿಮಿಷದಲ್ಲಿ ಅವರು ಬಂದಿರುತ್ತಾರೆ ಎಂದರೆ ಸಾಕ್ಷಿ 10 ನಿಮಿಷದಲ್ಲಿ ಎಂದು ನುಡಿಯುತ್ತಾರೆ.

2ನೇ ಆರೋಪಿಯು ನಿಮಗೆ ಮೊದಲೇ ಪರಿಚಯಸ್ಥರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2ನೇ ಆರೋಪಿಯ ಮನೆ ವಿಳಾಸ ನಿಮಗೆ ಗೊತ್ತಿತ್ತಾ ಎಂದರೆ ಸಾಕ್ಷಿ ದೂರು ನೀಡಿದಾಗ ಅವರ ವಿಳಾಸವನ್ನು ಚೀಟಿಯಲ್ಲಿ ಬರೆದುಕೊಂಡಿದ್ದೆ ಎಂದು

ನುಡಿಯುತ್ತಾರೆ. ನೀವು ಮಹಜರಿನಲ್ಲಿ ತೋರಿಸಿದಂತೆ 2ನೇ ಆರೋಪಿಯವರ ಮನೆಯ ಅಕ್ಕ ಪಕ್ಕ ಮನೆಗಳು ಇವೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು 2ನೇ ಆರೋಪಿಯ ಮನೆಗೆ ಹೋದಾಗ ಅಕ್ಕಪಕ್ಕದ ಮನೆಯವರು ಜಾಸ್ತಿ ಸೇರಿದ್ದರು ಎಂದರೆ ಸಾಕ್ಷಿಯು ಜಾಸ್ತಿ ಇದ್ದರು ಆದರೆ ಎಷ್ಟು ಎಂದು ನೆನಪಿರುವುದಿಲ್ಲವೆಂದು ನುಡಿಯುತ್ತಾರೆ. ನೀವು 2ನೇ ಆರೋಪಿಯವರ ಮನೆಗೆ ಹೋದಾಗ ಅವರನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ಅವರ ಮಗ ಇದ್ದರು ಎಂದು ನುಡಿಯುತ್ತಾರೆ. ಅಕ್ಕಪಕ್ಕದ ಮನೆಯವರನ್ನು ಸಾಕ್ಷಿದಾರರನ್ನಾಗಿ ಬರಲು ಕೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಕ್ಕಪಕ್ಕದ ಮನೆಯವರನ್ನು ಸಾಕ್ಷಿಯನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ.

ಸದ್ರಿ ಮನೆಯು 2ನೇ ಆರೋಪಿಗೆ ಸೇರಿದ್ದು ಎಂಬುದರ ಬಗ್ಗೆ ಏನಾದರೂ ರೇಷನ್ ಕಾರ್ಡ್, ಆಧಾರ್ ಕಾರ್ಡು, ವಿದ್ಯುತ್ ಬಿಲ್ಲು ಹಾಗೂ ತೆರಿಗೆ ಸಂದಾಯ ರಶೀದಿಯನ್ನು ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿ ವಿದ್ಯುತ್ ಬಿಲ್ಲನ್ನು ಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಮಹಜರಿನಲ್ಲಿ ಮನೆಯ ಡೋರ್ ನಂಬರ್ ನ್ನು ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವ ಮನೆಯು ಹಂಚಿನ ಮನೆಯಾ, ಸ್ಲಾಬ್ ಮನೆಯಾ ಅಥವಾ ಶೀಟಿನ ಮನೆಯಾ ಎಂದರೆ ಸಾಕ್ಷಿ ಶೀಟಿನ ಮನೆ ಎಂದು ನುಡಿಯುತ್ತಾರೆ. ನೀವು ಹೇಳುವ ಮನೆಗೆ ಎಷ್ಟು ಕೋಣೆಗಳು ಇದ್ದವು ಎಂದರೆ ಸಾಕ್ಷಿ ಕೋಣೆಗಳು ಇದ್ದಿರಲಿಲ್ಲ ಅಕ್ಕಿ ತುಂಬಿದ ಹಾಲ್ ಇತ್ತು ಎಂದು ನುಡಿಯುತ್ತಾರೆ. ಸದ್ರಿ ಮನೆಯಲ್ಲಿ ಯಾರಾದರೂ ವಾಸ ಇದ್ದಾರಾ ಎಂಬುದರ ಬಗ್ಗೆ ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾಡಿರುತ್ತೇನೆ ಆಗ ಅವರು ಹಂಜಾ ಎಂಬುವರು ಬಾಡಿಗೆ ಇದ್ದಾರೆ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

ನೀವು ಅಲ್ಲಿಗೆ ಹೋದಾಗ 1ನೇ ಆರೋಪಿ ಇದ್ದಿದ್ದಾರಾ ಎಂದರೆ ಸಾಕ್ಷಿ ಇದ್ದಿದ್ದರು ಎಂದು ನುಡಿಯುತ್ತಾರೆ. ನೀವು ಅವರ ಹೆಸರು ಮತ್ತು ವಿಳಾಸ ಬಗ್ಗೆ ದಾಖಲೆಯನ್ನು

ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿಯು 2ನೇ ಆರೋಪಿಯ ಮನೆಯಲ್ಲಿ ಬಾಡಿಗೆ ಇರುವ ಬಗ್ಗೆ ಬಾಡಿಗೆ ಕರಾರು ಪತ್ರ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ 1ನೇ ಆರೋಪಿಯನ್ನು ಸೇರಿಸಿರುತ್ತೀರಿ ಎಂದರೆ ಸಾಕ್ಷಿ ಅವರು ಸರಕಾರದ ಅನ್ನ ಭಾಗ್ಯ ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹ ಮಾಡಿರುವುದಾಗಿ ಸೇರಿಸಿರುವುದಾಗಿ ನುಡಿಯುತ್ತಾರೆ.

ನೀವು ಮನೆಯನ್ನು ಪರಿಶೀಲನೆ ಮಾಡುವ ಮೊದಲು ನ್ಯಾಯಾಲಯದಿಂದ ಶೋಧನಾ ವಾರಂಟನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿ ಶೋಧನಾ ವಾರಂಟು ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವಂತಹ ಮನೆಯ ಬಾಗಿಲು ಯಾವ ದಿಕ್ಕಿಗೆ ಇತ್ತು ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಮನೆಯ ಯಾವ ದಿಕ್ಕಿಗೆ ಸದ್ರಿ ಅಕ್ಕಿ ಚೀಲಗಳು ಇದ್ದವು ಎಂದರೆ ಸಾಕ್ಷಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಹೇಳುವಂತಹ ಅಕ್ಕಿ ಚೀಲಗಳು ಕಟ್ಟಿದ್ದಾರಾ ಅಥವಾ ಹೊಲಿಗೆ ಹಾಕಿದ್ದಾರಾ ಎಂದರೆ ಸಾಕ್ಷಿ ಹಾಗೆ ಓಪನ್ ಇತ್ತು ಎಂದು ನುಡಿಯುತ್ತಾರೆ. ಒಂದು ಲೈನ್ ನಲ್ಲಿ ಎಷ್ಟು ಅಕ್ಕಿ ಚೀಲಗಳು ಓಪನ್ ಆಗಿದ್ದವು ಎಂದರೆ ಸಾಕ್ಷಿ 26 ಚೀಲಗಳು ಓಪನ್ ಆಗಿದ್ದವು ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ 26 ಚೀಲಗಳು ತೆರೆದಿದ್ದವು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ಚೀಲಗಳಿಗೆ ಸ್ಥಳದಲ್ಲಿ ನಂಬರ್ ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವಂತಹ ಅಕ್ಕಿ ಚೀಲಗಳು ಗೋಣಿ ಚೀಲದಲ್ಲಿ ಇದ್ದಿದ್ದವಾ ಅಥವಾ ಪ್ಲಾಸ್ಟಕ್ ಚೀಲದಲ್ಲಿ ಇದ್ದಿದ್ದವಾ ಎಂದರೆ ಸಾಕ್ಷಿ ಬಿಳಿ ಪಾಲಿಥೀನ್ ಚೀಲ ಎಂದು ನುಡಿಯುತ್ತಾರೆ. ಸರಕಾರದಿಂದ ಖರೀದಿಸಿರುವ ಅಕ್ಕಿ ಹಾಗೂ ಮಿಲ್ ನಿಂದ ಖರೀದಿಸುವ ಅಕ್ಕಿಗಳು ಸಾಮಾನ್ಯವಾಗಿ ಒಂದೇ ರೀತಿ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಸದ್ರಿ ಅಕ್ಕಿಯ ಜಾತಿ ಯಾವುದೆಂದು ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಆದರೆ ವೈಟ್ ರೈಸ್ ಎಂದು ನುಡಿಯುತ್ತಾರೆ. ಸರಕಾರದಿಂದ ವಿತರಿಸುವ ಬೆಳ್ತಿಗೆ ಅಕ್ಕಿಯನ್ನು ಮಿಲ್ ನಿಂದ ಪಡೆದರೆ ಅದು ಒಂದೇ ರೀತಿ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವೈಟ್ ರೈಸ್ ಎಲ್ಲಾ ಒಂದೇ ರೀತಿ ಇರುತ್ತದೆ ಎಂದರೆ ಸಾಕ್ಷಿ ಒಂದೇ ರೀತಿ ಇರುತ್ತದೆ ಆದರೆ ದಪ್ಪ ಮತ್ತು ತೆಳು ಬರುತ್ತದೆ ಎಂದು ನುಡಿಯುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಅಕ್ಕಿ ಸರಕಾರದಿಂದ ಸರಬರಾಜಾಗುವ ಅಕ್ಕಿ ಎಂಬುದರ ಬಗ್ಗೆ ನಿಖರವಾಗಿ ಏನಾದರೂ ಗುರುತು ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ವಶಪಡಿಸಿಕೊಂಡ ಎಲ್ಲಾ ಅಕ್ಕಿಗಳ ತಳಿ ಯಾವುದೆಂದು ಹೇಳು ಬರುತ್ತಿದೆಯಾ ಎಂದರೆ ಸಾಕ್ಷಿ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸರಕಾರದಿಂದ ವಿತರಿಸುವ ಅಕ್ಕಿ ಇಂತಹ ತಳಿಯ ಅಕ್ಕಿ ಎಂಬುದರ ಬಗ್ಗೆ ನಿಮ್ಮ ಕಚೇರಿಯಲ್ಲಿ ವರದಿ ಇರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ವಶಪಡಿಸಿಕೊಂಡಿರುತ್ತೇನೆ ಎಂದು ಹೇಳಿರುವ ಅಕ್ಕಿ ಚೀಲಗಳ ಮೇಲೆ ಸರಕಾರದ ಯಾವುದಾದರೂ ಮೊಹರು ಇತ್ತಾ ಎಂದರೆ ಸಾಕ್ಷಿ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ.

ನೀವು 2ನೇ ಆರೋಪಿಗೆ 1ನೇ ಆರೋಪಿಯು ಯಾವಾಗ ಸದ್ರಿ ಅಕ್ಕಿಯನ್ನು ತಂದಿರುತ್ತಾರೆ ಹಾಗೂ ಯಾವಾಗ ದಾಸ್ತಾನು ಮಾಡಿರುತ್ತಾರೆ ಹಾಗೂ ಯಾವ ಊರಿನಿಂದ ಖರೀದಿ ಮಾಡಿರುತ್ತಾರೆ ಎಂದು ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು 1ನೇ ಆರೋಪಿ ಯಾವ ವ್ಯಕ್ತಿಯಿಂದ ಖರೀದಿ ಮಾಡಿದ್ದರು ಎಂಬುದರ ಬಗ್ಗೆ ಕೇಳಿರುತ್ತೀರಾ ಎಂದರೆ ಸಾಕ್ಷಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹಾಗೆ ಕೇಳಿದ ಬಗ್ಗೆ 1ನೇ ಆರೋಪಿಯು ಉತ್ತರ ಕೊಟ್ಟ ಬಗ್ಗೆ ಯಾವ ದಾಖಲೆ ಇದೆ ಎಂದರೆ ಸಾಕ್ಷಿ ಹಾಗೆ ಜನರಲ್ ಆಗಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನೀವು ವಶಪಡಿಸಿಕೊಂಡ ಅಕ್ಕಿಯು ಸರಕಾರದಿಂದ ಸರಬರಾಜು ಆದ ಅಕ್ಕಿಯೇ ಎಂಬುದರ ಬಗ್ಗೆ ಯಾವಾದದರೂ ಸ್ಯಾಂಪಲ್ ಅಕ್ಕಿಯಿಂದ ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿ ನಾನು ನನ್ನ

ವಾಹನದಲ್ಲಿ ಸ್ಯಾಂಪಲ್ ಗಾಗಿ ಅಕ್ಕಿಯನ್ನು ಇಟ್ಟುಕೊಂಡಿದ್ದೇನು ಸದ್ರಿ ಅಕ್ಕಿಯಿಂದಲೇ ಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಆದರೆ ಆ ಬಗ್ಗೆ ಯಾವುದೇ ದಾಖಲೆಯಲ್ಲಿ ನಮೂದು ಮಾಡಿರುವುದಿಲ್ಲವೆಂದು ನುಡಿಯುತ್ತಾರೆ.

ಸರಕಾರಿ ಅಕ್ಕಿಯೆಂದು ಕಂಡು ಹಿಡಿಯುವುದರ ಬಗ್ಗೆ ನಿಮಗೆ ವಿಶೇಷವಾದ ಜ್ಞಾನ ಇದೆಯಾ ಎಂದರೆ ಸಾಕ್ಷಿ ಆ ರೀತಿ ಇರುವುದಿಲ್ಲ ಆದರೆ ಸಾಮಾನ್ಯವಾಗಿ ಸರಕಾರದ ಅಕ್ಕಿಯೆಂದು ಕಂಡು ಹಿಡಿಯಬಹುದು ಎಂದು ನುಡಿಯುತ್ತಾರೆ. ಯಾವ ಯಂತ್ರದ ಮುಖಾಂತರ ಅಕ್ಕಿಗಳನ್ನು ಅಳತೆ ಮಾಡಿರುತ್ತೀರಿ ಎಂದರೆ ಸಾಕ್ಷಿ ಡಿಜಿಟಲ್ ತೂಕ ಯಂತ್ರದ ಮುಖಾಂತರ ಎಂದು ನುಡಿಯುತ್ತಾರೆ. ಸದ್ರಿ ಡಿಜಿಟಲ್ ತೂಕದ ಯಂತ್ರವನ್ನು ಎಲ್ಲಿಂದ ತರಿಸಿರುತ್ತೀರಿ ಎಂದರೆ ಸಾಕ್ಷಿ ಅಲ್ಲೇ ಹತ್ತಿರದಲ್ಲಿ ಇದ್ದ ಅಂಗಡಿಯಿಂದ ಎಂದು ನುಡಿಯುತ್ತಾರೆ. ನೀವು ಮನೆಯನ್ನು ಪರಿಶೀಲಿಸಿ ಸದ್ರಿ ಅಕ್ಕಿಯನ್ನು ತೂಕ ಹಾಕಿ ಎಲ್ಲಾ ಕ್ರಮ ಮುಗಿಯಲು ಎಷ್ಟು ಹೊತ್ತು ಆಗಿತ್ತು ಎಂದರೆ ಸಾಕ್ಷಿ 2 ಗಂಟೆಯೊಳಗೆ ಎಂದು ನುಡಿಯುತ್ತಾರೆ. ಅನಂತರ ನೀವು ದಾಖಲೆಗಳನ್ನು ಬರೆಯಲು ಪ್ರಾರಂಭ ಮಾಡಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಮಹಜರನ್ನು ಎಷ್ಟು ಗಂಟೆಯವರೆಗೂ ತಯಾರಿಸಿರುತ್ತೀರಿ ಎಂದರೆ ಸಾಕ್ಷಿ 6-05 ರಿಂದ 7-05ರವರೆಗೂ ಮಾಡಿರುವುದಾಗಿ ನುಡಿಯುತ್ತಾರೆ. ನೀವು ಮಹಜರಿನಲ್ಲಿ ಮನೆಯ ಹೊರಗಿನ ಗಡಿ ಗುರತನ್ನು ಕಾಣಿಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರಿನ ಪ್ರಕಾರ ಮಹಜರನ್ನು ಹೊರಗಡೆ ತಯಾರಿಸಿದ್ದು ಎಂದರೆ ಸಾಕ್ಷಿ ಹೌದು ಕಾರಣ ಹಾಲ್ ನಲ್ಲಿ ಕರೆಂಟ್ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಮಹಜರನ್ನು ಯಾರ ಕೈಬರಹದಿಂದ ಬರೆದಿದ್ದು ಎಂದರೆ ಸಾಕ್ಷಿ ಪೊಲೀಸ್ ಎಂದು ನುಡಿಯುತ್ತಾರೆ. ಸದ್ರಿ ಮಹಜರು ಜರುಗಿಸಿ ಎಷ್ಟು ಗಂಟೆ ನಂತರ ದೂರನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಮಹಜರಾದ ಅರ್ಧ ಗಂಟೆ ನಂತರ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ ಎಂದು

ನುಡಿಯುತ್ತಾರೆ. ದೂರನ್ನು ನೀಡುವಾಗ ನೀವು ತಯಾರಿಸಿದ ಮಹಜರ್ ಜೊತೆಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಉಳಿದ ಅಕ್ಕಿಯನ್ನು ಯಾರ ವಶಕ್ಕೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಕೃಷಿ ಉತ್ಪನ್ನ ಮಾರುಕಟ್ಟೆಯ ಗೋಧಾಮಿಗೆ ಹಸ್ತಾಂತರಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದ್ರಿ ಅಕ್ಕಿಗಳನ್ನು ಯಾವಾಗ ಹಸ್ತಾಂತರಿಸಿರುತ್ತೀರಿ ಎಂದರೆ ಸಾಕ್ಷಿ ಪ್ರ.ವ.ವರದಿ ದಾಖಲಾದ ತಕ್ಷಣ ರಾತ್ರಿ 8-30ರ ಒಳಗೆ ಎಂದು ನುಡಿಯುತ್ತಾರೆ. ಅಕ್ಕಿಗಳನ್ನು ಹಸ್ತಾಂತರ ಮಾಡಿದ ಬಗ್ಗೆ ಏನಾದರೂ ದಾಖಲೆ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದ್ರಿ ದಾಖಲೆ ನಮ್ಮ ಕಚೇರಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ದಾಖಲೆಯನ್ನು ತನಿಖಾ ಸಮಯದಲ್ಲಿ ಪೊಲೀಸರಿಗೆ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಯಾವುದೇ ಅಕ್ಕಿಯನ್ನು ಜಪ್ತಿ ಪಡಿಸಿಕೊಂಡಿರದ ಕಾರಣ ಸದ್ರಿ ದಾಖಲೆಯನ್ನು ನೀವು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ದೂರನ್ನು ನೀವು ಠಾಣೆಗೆ ಹೋಗುವಾಗಲೇ ಟೈಪು ಮಾಡಿಸಿಕೊಂಡು ಹೋಗಿರುತ್ತೀರಾ ಅಥವಾ ಠಾಣೆಗೆ ಹೋದ ನಂತರ ಟೈಪು ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಠಾಣೆಗೆ ಹೋಗುವ ಮೊದಲೇ ಸೈಬರ್ ನಲ್ಲಿ ಟೈಪ್ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹಾಗೂ ದೂರಿನಲ್ಲಿ ಹೇಳಿರುವ 2ನೇ ಆರೋಪಿಯ ಮನೆಗೆ ಹೋಗಿರುವುದಿಲ್ಲ ಹಾಗೂ ಅಲ್ಲಿ ಅಕ್ಕಿ ದಾಸ್ತಾನು ಇದ್ದಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹೇಳುವಂತಹ ಮನೆ 2ನೇ ಆರೋಪಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸಾಕ್ಷಿ ಅವರಿಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ಆದ ಕಾರಣ ನೀವು ಡೋರ್ ನಂಬರ್ ನ್ನು ಹಾಗೂ ಕರೆಂಟ್ ನಂಬ್ರವನ್ನು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಕರೆಂಟ್ ನಂಬರ್ ನ್ನು ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಹೇಳುವಂತಹ ಕಟ್ಟಡದಲ್ಲಿ 1ನೇ ಆರೋಪಿ ಬಾಡಿಗೆ ಇದ್ದಿರಲಿಲ್ಲ

ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. 1ನೇ ಆರೋಪಿ ಅಕ್ರಮವಾಗಿ ಅನ್ನ ಭಾಗ್ಯ ಅಕ್ಕಿಯನ್ನು ಖರೀದಿಸಿರುವುದಿಲ್ಲ ಹಾಗೂ ದಾಸ್ತಾನು ಇಟ್ಟಿರುವುದಿಲ್ಲ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ನೀವು ವಶಪಡಿಸಿಕೊಂಡ ಮುದ್ದೆ ಮಾಲಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನಿಮಗೆ ಪರಿಚಯ ಇರುವ ವ್ಯಕ್ತಿಗಳನ್ನು ನಿಮ್ಮ ಕಚೇರಿಗೆ ಕರೆಯಿಸಿ ಮಹಜರನ್ನು ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಸದ್ರಿ ಪೋಟೋವನ್ನು ಎಲ್ಲಿ ತೆಗೆದಿದ್ದು ಎಂಬುದರ ಬಗ್ಗೆ ಡೋರ್ ನಂಬ್ರ ಹಾಗೂ ಬೋರ್ಡು ಇರುವುದಿಲ್ಲ ಎಂದರೆ ಸಾಕ್ಷಿ ನಾವು ಹಾಲ್ ನಲ್ಲಿರುವ ಅಕ್ಕಿಯ ಪೋಟೋವನ್ನು ಮಾತ್ರ ತೆಗೆದಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-2ನ್ನು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**